**(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು, ತಾಃ 06-03-2026)**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಜೆ.ಡಿ.ಬಿ. ವಕೀಲರಿಂದ,**

5. ನಾನು ದಾವಾ ಆಸ್ತಿಗೆ ಸಂಬಂಧಿಸಿದಂತೆ ಸುಳ್ಳು ಇ-ಸ್ವತ್ತನ್ನು ಆಕರಿಸಿದರ ಕುರಿತು ಪ್ರತಿವಾದಿಗಳು ತಾಲೂಕು ಪಂಚಾಯತ್, ಜಿಲ್ಲಾ ಪಂಚಾಯತ್‌ಗೆ ನನ್ನ ವಿರುದ್ಧ ದೂರು ಸಲ್ಲಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಸದ್ರಿ ದೂರಿಗೆ ಸಂಬಂಧಿಸಿದಂತೆ ನಾನು ಈ ದಾವೆ ವಿಚಾರಣೆಗೆ ಬಾಕಿ ಇದೆ ಎಂದು ಆಕ್ಷೇಪ ಸಲ್ಲಿಸಿರುತ್ತೇನೆ ಎಂದರೆ ಗೊತ್ತಿಲ್ಲ. ದಾವಾ ಆಸ್ತಿಯ ಪಶ್ಚಿಮ ದಿಕ್ಕಿಗೆ ಪ್ರತಿವಾದಿಗಳ ಜಾಗ ಇರುತ್ತದೆ. ಪ್ರತಿವಾದಿಗಳ ಜಾಗದಲ್ಲಿ ಮನೆ ಇರುತ್ತದೆ ಎಂದರೆ ಹೌದು. ಸದ್ರಿ



ಮನೆ ಇರುವ ಜಾಗ ಸರ್ಕಾರಿ ಜಾಗ ಎಂದರೆ ಗೊತ್ತಿಲ್ಲ, ಶಾಲೆ ಇರುವ ಜಾಗ ಆಗಿರುತ್ತದೆ. ಸದ್ರಿ ಪ್ರತಿವಾದಿಗಳ ಮನೆ ಇರುವ ಜಾಗ ಸರ್ವೆ ನಂಬರ್ 6ಅ2 ರಲ್ಲಿ ಬರುತ್ತದೆ ಎಂದರೆ ಹೌದು. ಪ್ರತಿವಾದಿಗಳ ಮನೆ ಇರುವ ಜಾಗ ಮತ್ತು ದಾವಾ

ಆಸ್ತಿಯು ಪೋಡಿ ಆಗುವ ಪೂರ್ವದಲ್ಲಿ ಒಂದೆ ಸರ್ವೆ ನಂಬರ್ ಆದ 6ಅ3 ರಲ್ಲಿ ಇತ್ತು ಎಂದರೆ ಗೊತ್ತಿಲ್ಲ. ಸರ್ವೆ ನಂಬರ್ 6ಅ3 ಮೂಲದಲ್ಲಿ ಸರ್ಕಾರದ ಹೆಸರಿನಲ್ಲಿ ಇತ್ತು ಎಂದರೆ ಗೊತ್ತಿಲ್ಲ.

6. ಪ್ರತಿವಾದಿಯು ತನ್ನ ಮನೆ ಇರುವ ಜಾಗದ ಕಬ್ಜೆಗೆ ತೊಂದರೆ ಮಾಡಬಾರದು ಎಂದು ಸರ್ಕಾರ ಮತ್ತು ಶಾಲೆಯ ವಿರುದ್ಧ ದಾವೆ ದಾಖಲಿಸಿ ಶಾಶ್ವತ ನಿರ್ಬಂಧಕಾಜ್ಞೆಯನ್ನು ಆದೇಶವನ್ನು ಪಡೆದುಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ದಾವಾ ಆಸ್ತಿಯ 12 ಅಣೆ ಜಾಗದಲ್ಲಿ ಪ್ರತಿವಾದಿಯ ಎರಡು ತೆಂಗಿನ ಮರ ಮತ್ತು ಒಂದು ಶೆಡ್ ಇರುತ್ತದೆ ಎಂದರೆ ಸಾಕ್ಷಿಯು ಶೆಡ್ ಇರುತ್ತದೆ ಅದರಲ್ಲಿ ನನ್ನ ಅಣ್ಣ ಉಳಿದುಕೊಂಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ನಾನು ಹೇಳುವಂತೆ ದಾವಾ ಆಸ್ತಿಯ 12 ಅಣೆ ಜಾಗದಲ್ಲಿ ಶೆಡ್ ಇದ್ದು ಅದರಲ್ಲಿ ನನ್ನ ಅಣ್ಣ ಉಳಿದುಕೊಂಡಿದ್ದಾರೆ ಎಂಬ ವಿಷಯವನ್ನು ವಾದ ಪತ್ರದಲ್ಲಿ ಹೇಳಿರುವುದಿಲ್ಲ. ಷದ್ರಿ ಜಾಗ ಮಾಲ್ಕಿ ಜಾಗ ಆಗಿರುತ್ತದೆ. ಪ್ರತಿವಾದಿಗಳು ದಾವಾ ಸ್ಥಳದ ಪಶ್ಚಿಮ ದಿಕ್ಕಿನಲ್ಲಿ ಪಾಗಾರ ಹಾಕಲು ಬಿಡದೆ ಇದ್ದ ಕಾರಣ ಈ ದಾವೆ ದಾಖಲಿರುತ್ತೇನೆ. 4 ಚದರ ಮೀಟರ್ ಪಾಗಾರ ಹಾಕಲು ಪ್ರತಿವಾದಿಗಳು ತಕಾರಾರು ಮಾಡಿರುತ್ತಾರೆ. ಪ್ರತಿವಾದಿಗಳ ಕಬ್ಜಾದಲ್ಲಿರುವ 12 ಅಣೆ ಸರ್ಕಾರಿ ಜಾಗದಲ್ಲಿ ನಾನು ಪಾಗಾರ ಹಾಕಲು ಪ್ರಯತ್ನಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಕಾಣಿಸಿರುವಂತಹ 12 ಅಣೆ ಜಾಗ ನನ್ನ ಕಬ್ಜಾದಲ್ಲಿರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಇ-ಸ್ವತ್ತನ್ನು ಸೃಷ್ಠಿಸಿಕೊಂಡು ಪ್ರತಿವಾದಿಗಳ ಕಬ್ಜಾದಲ್ಲಿರುವ 12 ಅಣೆ ಸರ್ಕಾರಿ ಜಾಗವನ್ನು ಬಲತ್ಕಾರದಿಂದ ನನ್ನ ವಶ ಮಾಡಿಕೊಳ್ಳಲು ಈ ಸುಳ್ಳು ದಾವೆ ತಂದಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿರುವ ಎಲ್ಲಾ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ.**

**ಸಹಿ ಇದೆ**

**ಹೆಚ್ಚುವರಿ ಸಿವಿಲ್ ಜಡ್ಜ್, ಭಟ್ಕಳ.**